# ಸಾವಯವ ಕೃಷಿಕನ ಬಾಳನ್ನು ರಸವತ್ತಾಗಿಸಿದ ಫಲವತ್ತಾದ ಬಾಳೆ



ಸಾವಯವ ಕೃಷಿಯನ್ನು ಸಂಪೂರ್ಣವಾಗಿ ಸದ್ಭಳಕೆ ಮಾಡಿಕೊಂಡ ರೈತರು ಬೆರಳೆಣಿಕೆಯಷ್ಟು ಮಾತ್ರ. ತುಮಕೂರು ತಾಲ್ಲೂಕಿನ ಹೆಬ್ಬೂರು ಹೋಬಳಿ ಮಾಕನಹಳ್ಳಿಯ ರೈತ ಶಿವಕುಮಾರ ಸ್ವಾಮಿ ಸಾವಯವ ಕೃಷಿಯನ್ನು ಸದ್ಬಳಕೆ ಮಾಡಿಕೊಂಡು ಉತ್ತಮ ಇಳುವರಿಯನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಬಾಳೆ ಬೆಳೆಯನ್ನು ಸಾವಯವ ಪದ್ಧತಿಯಲ್ಲಿ ಬೆಳೆದು ಅದ್ಭುತವಾದ ಆದಾಯವನ್ನು ಕಂಡು, ಜೀವನದಲ್ಲಿ ತಮ್ಮ ಕುಟುಂಬವನ್ನು ಸುಸ್ಥಿರತೆಯತ್ತ ಕೊಂಡೊಯ್ದು ಸಂತಸಭರಿತ ರೈತರಾಗಿ ಹೊರಹೊಮ್ಮಿದ್ದಾರೆ. ಶಿವಕುಮಾರ ಸ್ವಾಮಿಯವರ ಯಶಸ್ಸನ್ನು ಕಂಡು ಸಾವಯವ ಕೃಷಿಯ ಬಗ್ಗೆ ಇವರಿಂದ ಹೆಚ್ಚಿನ ಮಾಹಿತಿ ಪಡೆಯಲು ಬೇರೆ ಬೇರೆ ಜಿಲ್ಲೆಗಳಿಂದ ರೈತರು ಆಗಮಿಸುತ್ತಾರೆ. ಸರ್ಕಾರದ ಸಾವಯವ ಗ್ರಾಮ ಯೋಜನೆಯ ನಂದಾಜ್ಯೋತಿ ಸಾವಯವ ಕೃಷಿ ಸಂಘ, ಮಾಕನಹಳ್ಳಿ, ಇದರ ಕಾರ್ಯದರ್ಶಿಯಾಗಿ ಸಾವಯವ ತೋಟಗಾರಿಕೆ ಬಗ್ಗೆ ಮಾಹಿತಿ ನೀಡುತ್ತಾ ಬಂದಿದ್ದಾರೆ.

ನೀರಾವರಿ ಬೇಸಾಯ ಮಾಡುತ್ತಿರುವ ಇವರು ಬಾಳೆಯಷ್ಟೇ ಅಲ್ಲದೇ, ತೆಂಗು, ಅಡಿಕೆ ಮಾವನ್ನೂ ಸಹ ಬೆಳೆಯುತ್ತಾರೆ. ಈ ರೈತ ತೋಟಗಾರಿಕೆಯಲ್ಲಿ ನೂತನ ತಂತ್ರಜ್ಞಾನಗಳಾದ ಹನಿ ನೀರಾವರಿ, ರಸಾವರಿ ಪದ್ಧತಿಗಳನ್ನು ಅಳವಡಿಸಿಕೊಂಡು, ಅಭಿವೃದ್ಧಿಯ ಪಥದಲ್ಲಿ ಸಾಗುತ್ತಿದ್ದಾರೆ. ಇವರ ಒಂದೊಂದು ಬೆವರ ಹನಿಯೂ ಆದಾಯ ತರುವ ಬಾಳೆಯ ಗೊನೆಯಾಗಿದೆ. ಅಡಿಕೆಯ ಗೊಂಚಲು ಚಿನ್ನದ ಅಂಗಡಿಯಂತೆ ಗೋಚರಿಸುತ್ತಿದೆ. ತೋಟಗಾರಿಕೆ ಇಲಾಖೆಯ ಅಧಿಕಾರಿಗಳ ಮಾರ್ಗದರ್ಶನ ಶಿವಕುಮಾರ ಸ್ವಾಮಿಯವರ ಬಾಳಿಗೆ ಹೊಸ ಚೈತನ್ಯವನ್ನು ತಂದಿದೆ. ಸಾವಯವ ಪದ್ಧತಿಯ ತೋಟಗಾರಿಕೆ ಶಿವಕುಮಾರಸ್ವಾಮಿಯವರನ್ನು ಉನ್ನತಿಯತ್ತ ಕೊಂಡೊಯ್ಯುತ್ತಿದೆ.

"ಸಾವಯವ ಕೃಷಿ....ರೈತನ ಖುಷಿ ! ! "